JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಮಂಡ್ಯ ಜಿಲ್ಲೆಯ ಕಥಾ ಸಾಹಿತ್ಯದಲ್ಲಿ–ಮಾರ್ಕ್ಸ್‌ವಾದ

**ಡಾ. ಮಂಜು.ಸಿ.ಎನ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಕಾರ್ಲ್‌ಮಾರ್ಕ್ಸ್ ಜರ್ಮನಿಯ ಪ್ರಖ್ಯಾತ ತತ್ವಜ್ಞಾನಿ. ಈತ ಆಧುನಿಕ ಜಾಗತಿಕ ಸಮಾಜದ ಮೇಲೆ ಪ್ರಭಾವ ಬೀರಿದ ಪ್ರಮುಖ ವ್ಯಕ್ತಿಗಳಲ್ಲೊಬ್ಬನಾಗಿದ್ದಾನೆ. ಮಾರ್ಕ್ಸನು ಬಂಡವಾಳ ಶಾಹಿಗಳು ಮತ್ತು ಕಾರ್ಮಿಕರ ನಡುವಿನ ಸಂಬಂಧಗಳನ್ನು ಆರ್ಥಿಕ ಅಂಶಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಿದ್ದಾರೆ. ಯಾವುದೇ ಒಂದು ಕಾಲದಲ್ಲಿ ಸಮಾಜ ತನ್ನ ಜೀವನಾವಶ್ಯಕತೆಗಳನ್ನು ಹೇಗೆ ಉತ್ಪಾದಿಸುತ್ತದೆ ಮತ್ತು ಹಂಚಿಕೊಳ್ಳುತ್ತದೆ ಎನ್ನುವ ಭೌತಿಕ ಸ್ಥಿತಿಗಳನ್ನು ಅನುಸರಿಸಿ ವಿವಿಧ ವರ್ಗಗಳು ಹುಟ್ಟಿಕೊಳ್ಳುತ್ತವೆ ಎಂಬುದು ಮಾರ್ಕ್ಸ್‌ನ ವಾದವಾಗಿದೆ. **"**ಮಾರ್ಕ್ಸ್‌ವಾದಿ ಇತಿಹಾಸದ ಸಿದ್ಧಾಂತದ ಪ್ರಕಾರ ಪ್ರಪಂಚದ ಇತಿಹಾಸವು ಜಾತಿ ಮತ್ತು ವರ್ಗಸಂಘರ್ಷದ ಇತಿಹಾಸವೇ ಆಗಿದೆ. ಇದು ನಿರಂತರವಾಗಿ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಸಾಗುತ್ತಿರುತ್ತದೆ. ಬಂಡವಾಳ ಶಾಹಿಗಳು ದೊಡ್ಡ ದೊಡ್ಡ ಯಂತ್ರಗಳನ್ನು ಹಾಕುತ್ತಾರೆ; ಅಲ್ಲಲ್ಲಿ ಬಹಳಷ್ಟು ಜನ ಕೂಲಿಗಾರರು ಒಟ್ಟಿಗೆ ಕೆಲಸ ಮಾಡುತ್ತಾರೆ. ಹೆಚ್ಚುತ್ತಿರುವ ಕೂಲಿಗಳನ್ನು ಕುರಿತು ಬರೆಯುತ್ತಾ ಇವರು ಬಂಡವಾಳ ಶಾಹಿಗಳ ಸಮಾಧಿಯ ಗುಂಡಿಗಳನ್ನು ತೆಗೆಯುವವರು**"**[1] ಎಂದು ಮಾರ್ಕ್ಸ್ ಹೇಳಿದ್ದಾರೆ.

ಮಾರ್ಕ್ಸ್‌ವಾದದ ನೆಲೆಯಲ್ಲಿ ಕನ್ನಡ ಕಥಾಸಾಹಿತ್ಯವನ್ನು ನೋಡಬಹುದಾಗಿದೆ. ಕಥಾಸಾಹಿತ್ಯ ಕೂಡ ಸಮಾಜದಲ್ಲಿ ಉತ್ಪಾದನೆಯಾಗುವ ಸಾಹಿತ್ಯ ಅಲ್ಲಿನ ಸಾಮಾಜಿಕ ಸಂಬಂಧ ಮತ್ತು ಒತ್ತಡಗಳ ಹಿನ್ನೆಲೆಯಲ್ಲಿ ರೂಪ ಪಡೆಯುತ್ತದೆ. ಜಾತಿ ಮತ್ತು ವರ್ಗವನ್ನು ನಿರ್ಮೂಲನೆ ಮಾಡುವ ರಾಜಕೀಯ ಪಕ್ಷಗಳಲ್ಲಿ ಅಧಿಕಾರದ ಹುದ್ದೆಗಳನ್ನು ಸೂಕ್ತ ಪ್ರಮಾಣದಲ್ಲಿ ನೀಡಬೇಕು ಎಂಬುದು ಮಾರ್ಕ್ಸ್‌ವಾದದ ತಿರುಳು. ದೇಶದಲ್ಲಿರುವ ಜಾತಿ ಮತ್ತು ವರ್ಗಸಂಘರ್ಷವನ್ನು ನಿರ್ನಾಮ ಮಾಡಿ ಸಮಸಮಾಜ ಸ್ಥಾಪನೆಯಾಗಬೇಕೆಂಬುದು ಮಾರ್ಕ್ಸ್‌ವಾದದ ಮೂಲ ಆಶಯವಾಗಿದೆ. ಮಂಡ್ಯ ಜಿಲ್ಲೆಯ ಅನೇಕ ಕಥೆಗಳಲ್ಲಿ ಮಾರ್ಕ್ಸ್‌ವಾದದ ಅಂಶಗಳಿವೆ. ಅವುಗಳಲ್ಲಿ ಆಯ್ದ ಕಥೆಗಳಲ್ಲಿ ಮಾರ್ಕ್ಸ್‌ವಾದದ ಅಂಶಗಳನ್ನು ಗುರುತಿಸಿ ದಾಖಲಿಸಿರುತ್ತೇನೆ.

**ಕಳೆ :** ಬೆಸಗರಹಳ್ಳಿ ರಾಮಣ್ಣ ಅವರ **'**ಕಳೆ**'** ಕತೆಯು ಮಾರ್ಕ್ಸವಾದ ಸಿದ್ಧಾಂತಕ್ಕೆ ಅತ್ಯುತ್ತಮ ಉದಾಹರಣೆ. ಇಲ್ಲಿ ಬರುವ **'**ಗೌಡ**'** ಹೊಲಗೇರಿಯ ಬೇಲೂರಿಯ ಮಗಳು ಕೆಂಪಿ ಗಂಡನನ್ನು ಬಿಟ್ಟು ಅಪ್ಪನ ಮನೆಯಲ್ಲಿ ನೆಲೆಸಿದ್ದು ಕಂಡು ಅವಳನ್ನು ಬಲೆಗೆ ಹಾಕಿಕೊಳ್ಳಲು ಅನೇಕ ರೀತಿಯ ಪ್ರಯತ್ನ ಮಾಡುತ್ತಾನೆ. ಕೆಂಪಿಯಾಗಲೀ, ತಾಯಿ ಬೇಲೂರಿಯಾಗಲಿ ಎಲ್ಲೂ ಪ್ರತಿಭಟಿಸುವ ಸೂಚನೆಗಳೇ ಇಲ್ಲ. **'**ಇಷ್ಟು ಹೊತ್ತಿಗೆ ಬರ್ತೀನಿ. ಚಿಲಕ ಹಾಕಬ್ಯಾಡ ಅಂತ ಹೇಳಬ್ಯಾಡ್ದೆ. ಊರಿಗೆ ಗೌಡರೆನ್ನಿಸಿದ ಇವರಿಗೆ ಅಷ್ಟೂ ಗುಂಡಿಗೆ ಇಲ್ವೇ**'** **"**ಐವತ್ತು ತುಂಬಿದರೂ ತಲೆಗೂದಲು, ಮೀಸೆ ನೆರೆಯಲು ಪ್ರಾರಂಭಿಸಿದ್ದರೂ, ಇಪ್ಪತ್ತರ ಯೌವನದ ಕೆನ್ನೆ ಚಿವುಟಿದರೆ ರಕ್ತ ಚಿಮ್ಮುವಂತಿರುವ ಮಗಳನ್ನು ಅನುಭವಿಸಬೇಕೆಂದಿರುವ ಗೌಡರ ಗಂಡಸುತವನ್ನು ಕಂಡು ಮೆಚ್ಚಿ ಬೆಂಬಲ ನೀಡಿದ್ದಳು. ಒಂದು ದಿನವೂ ಮುಖ ಸಿಂಡರಿಸಿಕೊಳ್ಳಲಿಲ್ಲ. ದಾರಿಯಲ್ಲಿ ಸಿಕ್ಕಿದಾಗ ಮೊದಲು ಎಷ್ಟು ಭಯ ಭಕ್ತಿಗಳಿಂದ ಇರುತ್ತಿದ್ದಳೋ ಹಾಗೇ ನಡೆದುಕೊಳ್ಳುತ್ತಿದ್ದಳು. ಕೆಂಪಿಯೂ ಅಷ್ಟೇ**"**.[2] ಈ ಮಾತುಗಳಲ್ಲಿ ಕಾರ್ಲ್ಸ್‌ಮಾರ್ಕ್ಸ್‌ರವರ ಜಾತಿ ಮತ್ತು ವರ್ಗಸಂಘರ್ಷದ ನೆಲೆಗಳನ್ನು ಗುರುತಿಸಬಹುದಾಗಿದೆ. ಕಥೆಗಾರರಾದ ರಾಮಣ್ಣನವರು ಇದರಲ್ಲಿ ಜಾತಿ ಮತ್ತು ವರ್ಗನೆಲೆಗಳನ್ನು ಸ್ಪಷ್ಟೀಕರಿಸಿದ್ದಾರೆ. ಎಷ್ಟೇ ಮಾನವೀಯ ಲೇಖಕರಾದರೂ ತನಗಿರಿವಿಲ್ಲದೆ ಅಪ್ರಜ್ಞಾಪೂರ್ವಕವಾಗಿ ಈ ರೀತಿಯ ಮಾತುಗಳನ್ನು

ಬರೆಯುವುದು ಸಾಧ್ಯ. ತಮ್ಮಲ್ಲಿ ಸೊಕ್ಕಿನಿಂದ ಮೆರೆಯುವ ಜಮೀನ್ದಾರರು ಅಸ್ಪೃಶ್ಯ ಹೆಣ್ಣು ಮಕ್ಕಳ ಬಗೆಗೆ ಸ್ವಲ್ಪವೂ ಮುಜುಗರ ಪಡದೇ ಅವರನ್ನು ಸೇರುವುದು ವಾಸ್ತವವಾದಿ ಚಿತ್ರವೇ ಎಂಬ ಅನುಮಾನ ಕೂಡ ಬರುತ್ತದೆ. ಜೊತೆಗೆ ಕೆಂಪಿಯ ತಾಯಿ ಬೇಲೂರಿ ವಯಸ್ಸಾದ ಗೌಡ ಕೆನ್ನೆ ಚಿವುಟಿದರೆ ರಕ್ತ ಚಿಮ್ಮುವಂತಿರುವ ಮಗಳನ್ನು ಅನುಭವಿಸುವುದನ್ನು ಕಂಡು ಮೆಚ್ಚಿ ಬೆಂಬಲ ನೀಡುವುದು ಕೇವಲ ಲೇಖಕರ ಊಹೆಯಲ್ಲವೆ? ಅಥವಾ ಜಮೀನ್ದಾರಿ ಜಾತಿಯ ಲೇಖಕರ ಮನಸ್ಥಿತಿಯೇ? ತಾಯಿಯೆ ತನ್ನ ಮಗಳನ್ನು ಗೌಡನಿಗೆ ಒಪ್ಪಿಸುವುದು ಯಾವ ಲಾಭಕ್ಕಾಗಿ ಎಂಬ ಯಾವುದೇ ಸಮಜಾಯಿಷಿಗಳಿಲ್ಲದೆ ಬೆರೆದ ಚಿತ್ರ ಲಕ್ಷ್ಮೀಯನ್ನು ಕೆಣಕಿದವನ ಮೇಲೆ ಬೀಳುವ ಬೀರನ ಚಿತ್ರದ ವಾಸ್ತವತೆಯ ಮುಂದೆ ಕ್ಷೀಣವಾಗುತ್ತದೆ. ಇವರ ಮತ್ತೊಂದು ಕಥೆ.

**'ಗರ್ಜನೆ' :** ಇವರ ಮೊತ್ತೊಂದು ಕಥೆ. ಇಲ್ಲಿ ವ್ಯಕ್ತಿತ್ವವೇ ಇಲ್ಲದ ಮರಿನಂಜ ಕುರಿನಂಜನಾಗಿ ಅನಾದರಕ್ಕೊಳಗಾಗುವುದು ವಾಸ್ತವವಾದರೆ, ಅವನಲ್ಲಿ ಜಾಗೃತವಾಗುವ ಸ್ವಾಭಿಮಾನದ ಪ್ರಜ್ಞೆಯೇ ಈ ಕಥೆಯ ವೈಶಿಷ್ಟ್ಯವಾಗಿದೆ. ಹಳ್ಳಿಗಾಡಿನ ಫ್ಯೂಡಲ್‌ಗಳ ದಬ್ಬಾಳಿಕೆಗೆ ಸಿಕ್ಕಿ ನಜ್ಜಿ ಹೋದ ಅನೇಕ ಕುಟುಂಬಗಳ ಕತೆ ಹೇಳುವ ಕುರಿನಂಜ ತಬ್ಬಲಿ ಹುಡುಗ. ತಾನು ತಬ್ಬಲಿಯಾದ ಕಾರಣಗಳನ್ನು ತಿಳಿಯುವ ಮೂಲಕ ಅವನು ಮನುಷ್ಯನಾಗುವ ಪ್ರಯತ್ನ ಮಾಡುತ್ತಾನೆ. ಗಂಡ ಸತ್ತ ತಾಯಿಗೆ ಊರಗೌಡನ ಕಾರಣದಿಂದ ಹುಟ್ಟಿದ ನನ್ನನ್ನು ಮಗನೆಂದು ಒಪ್ಪಿಕೊಳ್ಳದ ಗೌಡನನ್ನು ಕುತ್ತಿಗೆ ಹಿಡಿದು ಕೇಳಬೇಕೆನಿಸುವ ಪ್ರವೃತ್ತಿ ಅವನ ಸ್ವಾಭಿಮಾನದ ಬೆಳವಣಿಗೆಯೇ ಸರಿ. ಅವನು ಹೇಳುವ **"**ಹಾದರಕ್ಕೆ ಹುಟ್ಟಿದೋನು ಅಂದ್ರೆ ಪಟೇಲರ ಮುಂದೆ ಕತ್ತಿನ ಪಟ್ಟಿ ಹಿಡಿದು ಎಳೆದು ಕೊಂಡು ಹೋಗಿ ನಿಲ್ಲಿಸಿ ನಾನು ನಿಮಗೆ ಹುಟ್ಟಿದವನೋ. ಇಲ್ವೋ ಹೇಳಿ ಅಂತೀನಿ ಎಂದು ಬಾಯ ಮೇಲೆ ಬೆರಳಾಡಿಸಿ ಮುಂದಕ್ಕೆ ನಡೆದಾಗ ಅವನ ಕಾಲುಗಳಲ್ಲಿ ಅಪೂರ್ವ ಕೆಚ್ಚುತುಂಬಿತ್ತು.**"**[3] ಹೀಗೆ ಅನಾಥ ಮಕ್ಕಳ, ಹಾದರಕ್ಕೆ ಹುಟ್ಟಿದ ಮಕ್ಕಳಲ್ಲಿ ಪೂರ್ಣ ಮನುಷ್ಯನನ್ನು ಹುಡುಕುವುದೇ ಈ ಕಥೆಯ ಶೋಧನೆ. ಇಂತಹ ಹುಡುಕಾಟದ ಮೂಲಕ ಕತೆಗಾರ ದೌರ್ಜನ್ಯಕ್ಕೊಳಗಾದವರ ಪರನಿಂತು ಮಾತನಾಡುತ್ತಾರೆ. ಅವರೇ ಇವರ ನಾಯಕನಾಗುತ್ತಾನೆ. ಮನುಷ್ಯನ ಸ್ವಾಭಿಮಾನ ಜಾಗೃತಗೊಳಿಸುವ ಉನ್ನತಕಾರ್ಯಕ್ಕೆ ತಮ್ಮ ಸೃಜನಶೀಲತೆಯನ್ನು ಅರ್ಪಿಸಿಕೊಂಡಿದ್ದಾರೆ. ಕತೆಗಳ ವಸ್ತು ಸಮಷ್ಟಿ ಪ್ರಜ್ಞೆಯ ರೂಪು ತಳೆಯುತ್ತದೆ. ನಂತರ ಇಲ್ಲಿನ ರಾಜಕಾರಣ, ಸಾಮಾಜಿಕ ಬದುಕು, ವೈಯಕ್ತಿಕ ಸ್ವಾರ್ಥಗಳ ಕಡೆಗೆ ತಿರುಗುತ್ತದೆ. ದೇಶದ ಸಂಪತ್ತು ಸಮಾನವಾಗಿ ಹಂಚಿಕೆಯಾದಾಗ ಶ್ರಮಿಕರು ಮತ್ತು ಬಂಡವಾಳಗಾರರ ನಡುವಿನ ಅಂತರ, ತಾರತಮ್ಯ ಕಡಿಮೆಯಾಗಿ ಸಮಸಮಾಜ ಸೃಷ್ಟಿಯಾಗುತ್ತದೆ ಎಂದು ಮಾರ್ಕ್ಸ್ ತಮ್ಮ ಸಿದ್ಧಾಂತದಲ್ಲಿ ಜನರಿಗೆ ಅರಿವು ಮೂಡಿಸಿದ್ದಾರೆ.

**'ಜಾತ್ರೆಯಲ್ಲೊಂದು ಹೆಣದ ಸದ್ದು'**

ಸಂತೆಕಲಸಗೆರೆ ಪ್ರಕಾಶ್ ಅವರು ಈ ಕತೆಯಲ್ಲಿ ಹಿಂದುಳಿದವರು, ಅಸಹಾಯಕರು ಮತ್ತು ದಲಿತರನ್ನು ಹೇಗೆ ಬಲಿಪಶುಗಳನ್ನಾಗಿ ಮಾಡುತ್ತಾರೆಂದು ತಿಳಿಸಿದ್ದಾರೆ. ಉಳ್ಳವರು ಇಲ್ಲದವರ ಮೇಲೆ ದಬ್ಬಾಳಿಕೆಯನ್ನು ನಡೆಸುವ ಪ್ರಸಂಗ ಈ ಕಥೆಯಲ್ಲಿದೆ. ಇದನ್ನು ವಿರೋಧ ಮಾಡಿದರೆ ಅವರ ವಿರುದ್ಧ ಸಾಮಾಜಿಕ ಬಹಿಷ್ಕಾರವನ್ನು ಸಾರುತ್ತಾರೆ. ಇದಕ್ಕೆ ಈ ಕಥೆಯಲ್ಲಿನ ಶೇಷಪ್ಪ ಉತ್ತಮ ನಿದರ್ಶನ. ಸ್ಕೂಲ್ ಮಾಸ್ಟರ್ ಶಾಮಣ್ಣನವರು ನೆಲ ನೋಡುತ್ತಾ ಕುಂತವರು, ಯಾವ ಮಾತನ್ನೂ ಆಡಲಿಲ್ಲ. 'ಊರು ಉದ್ಧಾರ ಮಾಡುವುದಕ್ಕೆ ಶೇಷಪ್ಪ ಯಾರು? ಪಟ್ಟಣದಲ್ಲಿ ಓದಿಕೊಂಡು ಬಂದು ಊರ ಘನಂಧಾರಿಯಾಗಿ ಉದ್ಧಾರ ಮಾಡ್ತೀನಿ ಅಂತ ಹುಡುಗರ ಗುಂಪು ಕಟ್ಟಿಕೊಂಡು ಹಿರಿದೇವಮ್ಮನ ಜಾತ್ರೆ ನಡೆಯದಂತೆ ಮಾಡಿದ ಇವನ ಬುದ್ಧಿವಂತಿಕೆಗೆ ಮಣ್ಣಾಕ್ತು'.

ಎಂದು ಜರಿದ ಅವರು 'ಪಾಪ ಶಾಮಣ್ಣನವರ ಮುಖ ನೋಡಬೇಕು. ಹಿರಿಯರು ಬುದ್ಧಿವಂತರು, ಸಾಲದ್ದಕ್ಕೆ ಊರಿನ ಎಷ್ಟೋಜನ ವಿದ್ಯಾವಂತರಾಗಿ ಉದ್ಯೋಗಸ್ಥರಾಗಲು ಕಾರಣ ಆದವರು. ಇಂತವರ ಬಗ್ಗೆ ಮಾತನಾಡಲು ಯಾರ ಮನಸ್ಸಿಗೂ ಒಪ್ಪಿಗೆಯಾದುದಲ್ಲ. ಆದರೆ ಆನೆ ಹೊಟ್ಟೆಯಲ್ಲಿ ಸೂಲಂಗಿ ಹುಟ್ಟಿದಂತೆ, ಹುಟ್ಟಿರೋ ಶೇಷಪ್ಪ ಎಷ್ಟೇ ವಿದ್ಯಾವಂತನಾಗಿದ್ದರೂ ಅವನ ಈ ವಿದ್ಯೆ ಊರಲ್ಲಿ ಭಯ ಹುಟ್ಟಿಸಿತು. ನಡುಕ ತಂದಿತು. ಅವನು ಬರೆದ ಒಂದು ಅರ್ಜಿ ಜಾತಿ, ಕುಲ, ಕೇರಿ ಎನ್ನದೆ ನಡುಗಿಸಿ ಬಿಟ್ಟಿತು. ಇನ್ನು ಮುಂದೆ ಹಾಗಾಗುವುದು ಬೇಡ. ಶೇಷಪ್ಪ ಊರೊಳಗಿದ್ದರೆ ಪುನಃ ಅರ್ಜಿ ಬರೆದರೂ ಬರೀಬಹುದು. ಸುಮ್ಮನೆ ಬಿಡುವುದು ಬೇಡ. ಶೇಷಪ್ಪ ಅಪ್ಪಿತಪ್ಪಿ ಊರೊಳಗೆ ಉಳಿದುಕೊಂಡರೆ ಅವನಿಗೆ ಅನ್ನ-ಬೆಂಕಿ ಬಿಸಿನೀರು ಕೊಡಬಾರದು. ಒಂದು

ವೇಳೆ ಯಾರಾದರೂ ಕೊಟ್ಟರೆ ಅಂಥವರನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಎಚ್ಚರಿಕೆ ನೀಡಿ 'ಶೇಷಪ್ಪನಿಗೆ ಬಹಿಷ್ಕಾರ' ಹಾಕಿರುವುದಾಗಿ ಘೋಷಿಸಿದರು. ಮೇಲಿನ ಮಾತುಗಳಿಂದ ಹೇಗೆ ಶೇಷಪ್ಪ ಉಳ್ಳವರು ಮತ್ತು ಶ್ರೀಮಂತರು ನಡೆಸುವ ದರ್ಪದ ಆಟಕ್ಕೆ ಬಲಿಯಾಗಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುತ್ತಾನೆ ಎಂಬುದನ್ನು ತಿಳಿಯಬಹುದಾಗಿದೆ. ಮೌಢ್ಯತೆಯ ವಿರುದ್ಧ ಎಚ್ಚೆತ್ತ ಶೇಷಪ್ಪನನ್ನು ಅಧಿಕಾರಶಾಹಿ ವರ್ಗವು ಹೇಗೆ ಆತನನ್ನು ಬಂಧನಕ್ಕೊಳಪಡಿಸಿದೆ ಎಂಬುದನ್ನು ಗಮನಿಸಬಹುದಾಗಿದೆ.

**'ಸಮಗ್ರಕಥೆಗಳು'**: ಡಿ.ಕೃಷ್ಣಪ್ಪಗೌಡ ಅರಕೆರೆ ಅವರ 'ಸಮಗ್ರಕಥೆಗಳು' ಕಥಾಸಂಕಲನದಲ್ಲಿ ಬರುವ 'ಹಲ್ಕಾ ಬದುಕಿನ ಒಂದು ಘಟನೆ' ಕತೆಯು ಮಾರ್ಕ್ಸ್‌ಸಿದ್ಧಾಂತಕ್ಕೆ ಇನ್ನೊಂದು ಉದಾಹರಣೆಯಾಗಿ ಹೆಸರಿಸಬಹುದಾದ ಕಥೆಯಾಗಿದೆ. ಇದರಲ್ಲಿ ಬಳಸಿರುವ 'ಅವಳು ಜಾತಿಕೆಟ್ಟೋಳು' 'ಇಲ್ಲ ಮಗ ಊರಿನೋರು ಕಂಡ್ರೆ ಬುಟ್ಟಾರ. ಕದ್ದು ಕಾಣದಂಗೆ ಬಂದೀವ್ನಿ. ಕಂಡ್ರೆ ಜಾತಿಯಿಂದ ಹೊರಕ್ಕಾಕ್ತಾರೆ' ಮಾತುಗಳು ಜಾತಿ ಸಂಘರ್ಷವನ್ನು ಕುರಿತವುಗಳಾಗಿವೆ. 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ' ಕಥೆಯಲ್ಲಿ ಬರುವ ಮತ್ತೊಂದು ಪ್ರಸಂಗ ಮಾರ್ಕ್ಸ್‌ವಾದಕ್ಕೆ ನಿದರ್ಶನವಾಗಿದೆ. ಕಂಬಕ್ಕೆ ಕಟ್ಟಿದ ಹೊಲೆಯರ ಮಾದ 'ನಿಮ್ಮ ಪಾದಕ್ಕೆ ಬೀಳ್ತೀನೀ ತಪ್ಪಾಯ್ತು ನಿಮ್ಮ ದಮ್ಮಯ್ಯ ಬುಡ್ಬುಡಿ" ಎಂದು ಗೋಗರೆದು ಮಿಲ ಮಿಲನೆ ಒದ್ದಾಡಿದರೂ ಬಾರು ಕೋಲಿನಿಂದ ಥಳಿಸುತ್ತಿದ್ದ ಕೈಯಿ ತಡೆದದ್ದು, "ಹೊಡೆದಿದ್ದು ಸಾಕಾಗಲಿಲ್ವೇನೋ ಭಾವ. ಜೀವಾನೇ ತೆಗೆದು ಬುಡಬೇಕು ಅಂತಾ ಮಾಡಿದ್ದೀಯೇನು, ತಗಿ ತಗಿ. ಯಾರಾದರೂ ನೋಡಿದವರು ನಕ್ಕಾರು. ವಯಸ್ಸಾಯ್ತಾ ಆಯ್ತಾ ಸೂಳೆ ಪತಿವ್ರತೆಯಾಗಾಳಂತೆ, ನೋಡೋ ಭಾವ..." ಅವನ ಮಾತು ಮುಗಿಯುವಷ್ಟರಲ್ಲಿಯೇ "ಹೋಗೋ ಇವನೊಬ್ಬ ಇಲ್ಲಿ ಬಂದ ಪುರಾಣ ಹೇಳೋಕೆ" ಅಂತ ಸಿರ್ರನೆ ಸಿಡುಕಿದರೂ ಕೈಯಲ್ಲಿದ್ದ ಬಾರುಕೋಲನ್ನು ಅತ್ತ ಎಸೆದಾಗ ಕ್ರೋಧ ಜಾರಿ, ವಿವೇಕ ಎಚ್ಚೆತ್ತು ಪ್ರಶ್ನೆ ಕೇಳಿದಾಗ ಮನಸ್ಸು ಉತ್ತರಿಸಲಾರದೆ ತತ್ತರಿಸಿತ್ತು. ಇಲ್ಲಿ ಹೊಲೆಯರ ಮಾದನ ಪಾತ್ರದಲ್ಲಿ ಜಾತಿ ಮತ್ತು ವರ್ಗದ ನೆಲೆಗಳನ್ನು ಕಾಣಬಹುದಾಗಿದೆ. ಊರಗೌಡ ಹೊಲೆಯರ ಮಾದನನ್ನು ಕರೆದು "ನಿನಗೇನು ಕೇಡು ಬಂದಿದ್ದದೋ ಸೂಳೆ ಮಗನೇ, ಇನ್ನೊಬ್ಬರ ಮನೆಯಲ್ಲಿ ಜೀತಕ್ಕಿದ್ರೂ ಬೀಡಿತೆವಲು ಬೇರ ಬೇಕಲ್ವಾನಿಂಗೆ? ಕಲಿತದ್ದು ಬಿಡೆ ಕಲಕೇತಿ ಅಂದ್ರೆ, ನಾ ಊರನಾರ ಬಿಟ್ಟೇನು ಕಲಿತದ್ದು ಬಿಡಾಕಿಲ್ಲ ಅಂದ್ಲಂತೆ, ಯಾವಳೋ ಬೇವರ್ಸಿ. ಇನ್ನೊಂದ್ಸಾರಿ ಇಂಗ್ಮಾಡಿದ್ರೆ ನಿನ್ನ ಚಮ್ಡಸುಲ್ಸಿ ಬಿಡ್ತೀನಿ"[4] ಅನ್ನುವ ಮಾತು ಕೂಡ ಜಾತಿ ಸಂಘರ್ಷವನ್ನು ಬಿತ್ತರಿಸುತ್ತದೆ.

**'ಮಾಯೆ'** : ಕಥೆಯು ಮಾರ್ಕ್ಸ್‌ವಾದಕ್ಕೆ ಇನ್ನೊಂದು ಉದಾಹರಣೆಯಾಗಿದೆ. ಜೀತಪದ್ಧತಿ ನಿರ್ಮೂಲನೆಯಾಗಿ ಎಲ್ಲರೂ ಸಹಬಾಳ್ವೆಯ ಜೀವನವನ್ನು ನಡೆಸುವಂತಾಗಬೇಕೆಂಬುದು ಇವರ ವಾದ. 'ಮನಸ್ಸನ್ನು ತುಂಬಿದ ತಣ್ಣನೆಯ ಶಾಂತಿ ಮೈಯಲ್ಲೆಲ್ಲಾ ಹರಿದಾಡಿ, ಎಳೆ ಬಿಸಿಲಲ್ಲಿ ಉಲ್ಲಾಸದಿಂದ ಕುಳಿತಿದ್ದ ಗೌಡರ ಮರ್ಜಿಯನ್ನು ಅರಿತವನಂತೆ ಮಾದ ದನಗಳನ್ನು ಒಂದೊಂದಾಗಿ ಕೊಟ್ಟಿಗೆಯಿಂದ ಹೊರಕ್ಕೆ ತಂದು ಅಂಗಳದಲ್ಲಿ ಕಟ್ಟಿಹಾಕಿ ತಲೆ ಕೆರೆಯುತ್ತಾ ನಿಂತ. 'ಏನೋ ಮಾದ? ಎಂದರು ಗೌಡರು. 'ಅಯ್ಯೊ ತುಳಸೀನ ನಿಮ್ಮ ಹೊಟ್ಟೆ ಮಗಳಂಗೆ ಜೋಪಾನ ಮಾಡಿದ್ದೀರಿ. ಚಿಕ್ಕಂದಿನಿಂದಲೂ ಅವಳ ಹೊಟ್ಟೆ ಬಟ್ಟೆ ನೋಡಿಕೊಂಡು ಸಾಕಿದ್ದೀರಿ. ನಾನೂ ಅಪ್ಪ ಅವ್ವ ಇಲ್ಲದ ಪರದೇಸಿ. ಬಾಳ ವರ್ಷದಿಂದ ನಿಮ್ಮ ಹಟ್ಟೀಲಿ ಜೀತ ಮಾಡಿವ್ನಿ. ನಿಮ್ನೇ ಅಪ್ಪ ಅವ್ವ ಅಂತ ತಿಳಕಂಡವ್ನಿ. ನನ್ನ ತಪ್ಪಾ ಹೊಟ್ಟೆಲಾಕಂಡು ತುಳುಸೀನ ನಂಗ್ ಕೊಟ್ಟು ಮದುವೆ ಮಾಡಿ. ನಿಮ್ಮ ಹೆಸರೇಳಿ ದೀಪ ಹಚ್ಚಿಕೊಂಡು ಬದುಕುತೀವಿ'. ಅನ್ನುವ ಮಾತನ್ನ ಗಮನಸಿದರೆ ಬಂಡವಾಳ ಶಾಹಿ ವರ್ಗವು, ತಳಸಮುದಾಯದವರನ್ನು ತಮ್ಮ ಮನೆಗಳಲ್ಲಿ ಹೇಗೆ ದುಡಿಸಿಕೊಳ್ಳುತ್ತಿದ್ದರು ಎಂಬುದು ತಿಳಿಯುತ್ತದೆ. ಅಸಹಾಯಕರ ಮೇಲೆ ದಬ್ಬಾಳಿಕೆಗಳು ನಿರಂತರವಾಗಿ ನಡೆಯುತ್ತಲೇ ಇವೆ. ಇದರ ವಿರುದ್ದವಾಗಿ ಮಾರ್ಕ್ಸ್ ಹೋರಾಟಕ್ಕಿಳಿದರು.

**'ಅಂತ್ಯ' :** ಶಿವಳ್ಳಿ ಕೆಂಪೇಗೌಡರ ಕಥೆಯಾದ 'ಅಂತ್ಯ' ದಲ್ಲಿ "ನನ್ನ ಮ್ಯಾಗಳ ಮಚ್ಚರ್ಕೆ ನನ್ನ ಮಗಳ್ನ ಹಾಡು ಹಗ್ಲೊತ್ನೇಲೇ ಕೆಡಿಸ್ಬುಟ್ಟೇನೋ ಬೇವರ್ಸಿ ಸೂಳೇ ಮಗ್ನೆ, ಅಂತ ತಾಕತ್ತಿದ್ರೆ... ನನ್ಮೇಲೇ ಬರ್ಬೇಕಾಗಿತ್ತುಕಣೋ, ತಾಳು ನಿನಗ್ಮಾಡ್ತಿನಿ. ನಿನ್ನ ಕಳ್ಳು ಬಗ್ದು ನನ್ನ ಕತ್ಗೆ ಮಾಲೆಹಾಕಂಡು ನನ್ನೆಕ್ಕಡ್ದ ಕಾಲ ನಿನ್ನೆದೇ ಮ್ಯಾಲೆ ಮಡ್ಗಿ ಕಾಕ ಹಾಕ್ದೇಹೋದ್ರೆ ನನ್ನೆಸ್ರು ಈರಭದ್ರನೆ ಅಲ್ಲ!"[5] ಎಂದು ನುಡಿಯುವ ವೀರಭದ್ರನ ಮಾತಿನಲ್ಲಿ ತಳಸಮುದಾಯದವರ ರೋಷ ಕಿಚ್ಚು ಯಾವ ಮಟ್ಟಕ್ಕೆ ಮುಗಿಲು ಮುಟ್ಟಿದೆ ಎಂಬುದನ್ನು ಗಮನಿಸಬಹುದಾಗಿದೆ. ಮೇಲ್ವರ್ಗದವರು ತಳವರ್ಗದ ಹೆಣ್ಣನ್ನು ಕೇವಲ ಭೋಗದ ವಸ್ತುವಾಗಿ ಬಳಸಿಕೊಂಡು ಎಸೆಯುವ ವಿಚಿತ್ರವಾದ ಘಟನೆಯನ್ನು ಈರಭದ್ರನ ಈ ಮಾತು ಧ್ವನಿಸುತ್ತದೆ. ಸಮಾಜವಾದದ ಚಿಂತಕ ಕಾರ್ಲ್ಸ್‌ಮಾರ್ಕ್ಸ್‌ನು

ವೈಚಾರಿಕತೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದನು. ವೈಚಾರಿಕತೆ ಅನ್ನುವ ವಿಷಯ ಚರ್ಚಿಸುವಾಗ ವಿಚಾರ ಇಂಥದ್ದೇ ಆಗಿರಬೇಕೆನ್ನುವ ಕಟ್ಟುಪಾಡುಗಳೇನಿಲ್ಲ. ಹಾಗಂತ ಯಾವುದೇ ಒಂದು ವಿಚಾರವನ್ನು ಮಂಡಿಸದೇ ಬರೀಶಬ್ದ ಜೋಡಿಸಿ, ವಾಕ್ಯ ಪೋಣಿಸಿ ಬಿಟ್ಟರೆ ಸಾಕೆ ಅನ್ನುವ ಮತ್ತೊಂದು ಪ್ರಶ್ನೆ ಎದುರಾಗುತ್ತದೆ. ಭಾರತದ ಸಂದರ್ಭ ಕುರಿತು ಯೋಚಿಸುವುದಾದರೆ ನಾವೆಲ್ಲರೂ ಅನೇಕಾನೇಕ ಸಂಕೀರ್ಣ ಸಮಸ್ಯೆಗಳಲ್ಲಿ ಸಿಲುಕಿಕೊಂಡೆ ಇದ್ದೇವೆ. ಇಂತಹ ಜಟಿಲ ಸಮಸ್ಯೆಗಳ ಪರಿಹಾರಕ್ಕಾಗಿ ಆಯಾಕ್ಷೇತ್ರದ ಪರಿಣಿತರು ಕೆಲಸ ಮಾಡಬೇಕೆಂಬ ಅನಿವಾರ್ಯತೆ ಇಂದು ನಮ್ಮ ಮುಂದಿದೆ. ಈ ಕೆಲಸವನ್ನು ಕಾರ್ಲ್ಸ್‌ಮಾರ್ಕ್ಸ್ ಅವರು ಮಾಡಿದ್ದಾರೆ.

**'ಛಿದ್ರ' :** ಪ್ರೇಮಕಥೆಗಳ ಕತೆಗಾರ ಅನ್ನುವ ಉಪನಾಮ ಪಡೆದಿರುವ ನಾಗತಿಹಳ್ಳಿ ಚಂದ್ರಶೇಖರ ಅವರು ಅನೇಕ ಗಟ್ಟಿ ಮತ್ತು ಉತ್ಕೃಷ್ಟವಾದ ಕತೆಗಳನ್ನು ಬರೆದಿದ್ದಾರೆ. ಪ್ರಸ್ತುತ ಸಂದರ್ಭದ ಸಾಮಾಜಿಕ ನಡೆ ಧಾರ್ಮಿಕ ಕಂದಾಚಾರ, ಕೌಟುಂಬಿಕ ಅಸಮತೋಲನ, ದಾರಿತಪ್ಪುತ್ತಿರುವ ಯುವಜನಾಂಗ ಮುಂತಾದ ವಿಷಯಗಳನ್ನು ಒಳಗೊಂಡ ವೈಚಾರಿಕ ಪ್ರಜ್ಞೆಯನ್ನು ಇವರ ಕತೆಗಳಲ್ಲಿ ಕಾಣುತ್ತೇವೆ. ಕಲ್ಪನೆಗಿಂತ ಕಠೋರವಾದದ್ದು ವಾಸ್ತವ ಅನ್ನುವುದಕ್ಕೆ ಸಾಣೆ ಹಿಡಿದಂತಿದೆ. 'ಛಿದ್ರ' ಕಥಾಸಂಕಲನದಲ್ಲಿ ಬರುವ 'ನಾಟ್ಯರಾಣಿ ಶಾಂತಲಾ' ಕಥೆಯು ವಿಡಂಬನಾತ್ಮಕವಾಗಿ ಅಂತ್ಯಗೊಳ್ಳುತ್ತದೆ. ತುಂಬಾ ಮಾಮೂಲಿಯಾಗಿ ಕಾಣಿಸುವ ಕತೆಯ ಅಂತ್ಯದಲ್ಲಿ ಮಹತ್ವದ ತಿರುವು ಏನಾದರು ಕಾಣಬಹುದೇ ಅನ್ನುವ ಕುತೂಹಲ ಬರಿಯ ಕುತೂಹಲವಾಗಿ ಮಾತ್ರ ಉಳಿದುಬಿಡುತ್ತದೆ. ನಾಟ್ಯರಾಣಿ ಶಾಂತಲೆಯ ಅಪ್ರತಿಮ ರೂಪಕ್ಕೆ ಮಾರುಹೋದ ನಾಯಕ ಅಂತ್ಯದಲ್ಲಿ ಅವಳು ಅಂಗವಿಕಲೆ ಅನ್ನುವ ಸತ್ಯ ಅರಿಯುತ್ತಲೇ ತನ್ನ ಪೂರ್ವದ ಮನಸ್ಥಿತಿಯಿಂದ ವಿಮುಖನಾಗಿ ಅವಳತ್ತ ಬೆನ್ನು ತಿರುಗಿಸಿ ಸಾಗಿಬಿಡುತ್ತಾನೆ. ನಮ್ಮ ದೈನಂದಿನ ಬದುಕಿನಲ್ಲಿ ಈಗಲೂ ಇಂಥದ್ದನ್ನು ಮಾತ್ರ ಸಮಾಜದ ಹೆಣ್ಣುಮಕ್ಕಳು ಹೆಚ್ಚು ಕಾಣಲು ಶಕ್ಯವಿದೆ ಅನ್ನುವುದನ್ನೇ ಕಥೆಗಾರರು ಇಲ್ಲಿ ಒತ್ತಿಹೇಳಿದ್ದಾರೆ. ಶಾಂತಲೆಯಂಥವರೆಲ್ಲ ಇನ್ನೊಬ್ಬರು ತಳ್ಳಿಕೊಂಡು ಹೋಗುವ ಗಾಲಿ ಕುರ್ಚಿಯಲ್ಲಿಯೇ ಸಾಗಬೇಕೆ? ಗಾಲಿಗಳಿಗೆ ಬದಲಾಗಿ ತೋಳಿನಾಸರೆ ನೀಡುವವರು ಯಾರಿಲ್ಲವೆ? ಅನ್ನುವುದರತ್ತ ಲೇಖಕರು ಬೆರಳು ತೋರಿಸುತ್ತಾರೆ. ಇಂಥದ್ದೇ ಮತ್ತೊಂದು ಸನ್ನಿವೇಶವು 'ಭೂಮಿಗುಂಡಗಿದೆ' ಕಥೆಯಲ್ಲಿ ಕಂಡುಬರುತ್ತದೆ. ನಮ್ಮ ಸುತ್ತಣ ಸಮಾಜದಲ್ಲಿ ಅದೆಷ್ಟೋ ಜನ ಬಾಲುಗಳು ಮತ್ತು ಅಸಹಾಯಕ ರುಕ್ಮಿಣಿಯರು ನಮಗೆ ಕಾಣಿಸುತ್ತಾರೆ. ಆರ್ಥಿಕ ಮುಗ್ಗಟ್ಟಿಗೆ ನಜ್ಜುಗುಜ್ಜಾದ ಬಾಲುಗೆ ನಿಧಿಯಾಗಿ ಕಾಣಸಿಗುವವಳೇ ರುಕ್ಮಿಣಿ. ಸ್ಥಿತಿವಂತ ಶೆಟ್ಟಿಯ ಮಗಳು ರುಕ್ಕು ಸಪೂರ ಸುಂದರಿ ಅಲ್ಲದಿದ್ದರೂ ಕಣ್ಣುಕುಕ್ಕುವ ಹರೆಯದ ಉಬ್ಬುತಗ್ಗುಗಳು ಪಡೆದಾಕೆ, ಕಪ್ಪುದೇಹಸಿರಿಯುವಳು. ಕಥೆಯಲ್ಲಿನ ಮೂರು ಪ್ರಮುಖ ಪಾತ್ರಗಳು ಮೂಲಕ ಲೇಖಕರು ಮಾರ್ಕ್ಸ್‌ನ ವೈಚಾರಿಕತೆಯನ್ನು ಗುರುತಿಸಿದ್ದಾರೆ. ಸ್ವತಂತ್ರಳಾದರೂ ಹೆಣ್ಣು ಅಸಹಾಯಕಳು ಗಂಡು ಸಮಯ ಸಾಧಕ ಅನ್ನುವು ಸತ್ಯವನ್ನು ಲೇಖಕರು ಚಿತ್ರಿಸಿದ್ದಾರೆ.

ಹೀಗೆ ಜಿಲ್ಲೆಯ ಮುಂತಾದ ಕಥೆಗಾರರು ತಮ್ಮ ಕಥೆಗಳಲ್ಲಿ ಸಮಾನತವಾದವನ್ನು ಸಾರುವ ಮಾರ್ಕ್ಸ್‌ವಾದವನ್ನು ಗುರುತಿಸಿ ಬರೆದಿದ್ದಾರೆ. ಮಾರ್ಕ್ಸ್‌ವಾದವು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶ್ರಮಿಕರು ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಶ್ರಮಿಕರಿಗೆ ದುಡಿಮೆಗೆ ತಕ್ಕ ಪ್ರತಿಫಲ ಸಿಗದೆ ಹತಾಸೆಯ ಬದುಕನ್ನು ಬದುಕುವ ಸ್ಥಿತಿ ನಿರ್ಮಾಣವಾಗಿದೆ. ದೇಶದಲ್ಲಿ ಕಂಡುಬಂದಿರುವ ಅಸ್ಪೃಶ್ಯತೆ, ಜಾತಿಪದ್ಧತಿ, ಲಿಂಗಭೇದ ಮತ್ತು ವರ್ಣಭೇದ ನೀತಿಯ ವಿರುದ್ಧ ಹೋರಾಟ ಮಾಡಿದ ಮಾರ್ಕ್ಸ್ ಇವೆಲ್ಲಾ ಸಂಪೂರ್ಣವಾಗಿ ನಾಶವಾಗಬೇಕಾದರೆ ಶ್ರಮಿಕ ವರ್ಗದವರು ಜಾಗೃತಗೊಂಡು ವರ್ಗಸಂಘರ್ಷವನ್ನು ನಾಶಗೊಳಿಸಲು ನಾಂದಿಹಾಡಿದಾಗ ಮಾತ್ರ ಸಮ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಇದೊಂದೇ ಶಾಶ್ವತ ಪರಿಹಾರ ಎನ್ನುವುದು ಕಾರ್ಲ್‌ಮಾರ್ಕ್ಸ್‌ನ ವಾದವಾಗಿದೆ.

**ಕೊನೆಟಿಪ್ಪಣಿಗಳು :**

1. ನಟರಾಜ ಹುಳಿಯಾರ್: ಮಾರ್ಕ್ಸ್‌ವಾದ ಮತ್ತು ಸಮಾಜವಾದ, ಪು. 141
2. ಡಾ. ಎಲ್.ಹನುಮಂತಯ್ಯ 'ಕಥಾಕಥನ' ಪು. 65
3. ಅದೇ, ಪು. 67

4. ಕೃಷ್ಣಪ್ಪಗೌಡ ಅರಕೆರೆ 'ನೀ ಮಾಯೆಯೊಳಗೂ ನಿನ್ನೊಳು ಮಾಯೆಯೊ', ಪು. 15
5. ಶಿವಳ್ಳಿ ಕೆಂಪೇಗೌಡ, 'ಚಮ್ಮಾವುಗೆ', ಪು. 5

**ಪರಾಮರ್ಶನ ಗ್ರಂಥಗಳು :**


1. ಕರೀಗೌಡ ಬೀಚನಹಳ್ಳಿ, ಸಂಕಥನ, ಅಜಂತ ಪ್ರಕಾಶನ, ಬೆಂಗಳೂರು, 2000
2. ಕೃಷ್ಣಪ್ಪಗೌಡ.ಡಿ.ಅರಕೆರೆ, ಸಮಗ್ರ ಕಥೆಗಳು, ಪ್ರಬುದ್ಧ ಪ್ರಕಾಶನ, ಶಂಕರನಗರ, ಮಂಡ್ಯ, 2014
3. ನಾಗತಿಹಳ್ಳಿ ಚಂದ್ರಶೇಖರ್, ಪ್ರೇಮ ಕಥಾ ಸಂಪುಟ, ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, 1995